ಕೊಡಗು ಜಿಲ್ಲೆಯಲ್ಲಿ ಸೇಂದಿ ಇಳಿಸುವ ಹಕ್ಕನ್ನು ರದ್ದು ಗೊಳಿಸಿರುವುದು

295 (630) ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಸೇಂದಿ ಇಳಿಸುವ ಹಕ್ಕನ್ನು ಸರ್ಕಾರದವರು ರದ್ದುಗೊಳಿಸುದಕ್ಕೆ ಕಾರಣವೇನು?

ಆ) ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಇಳಿಸುವುದಕ್ಕೆ ಅನುಮತಿ ಇದ್ದು ಕೊಡಗು ಜಿಲ್ಲೆಯಲ್ಲಿ ಕುಲಕಸುಬುದಾರರಿಗೆ ಅನ್ಯಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಕೊಡಗಿನಲ್ಲಿ ಸೇಂದಿ ಇಳಿಸುವ ಸಾಕಷ್ಟು ಮರಗಳು ಲಭ್ಯವಿದ್ದು ಸರ್ಕಾರವದರು ಸೇಂದಿ ಇಳಿಸುವ ಹಕ್ಕನ್ನು ಮರಳಿ ದೊರಕಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು)

ಅ) ಸಾಕಷ್ಟು ಸೇಂದಿ ಮರಗಳು ಲಭ್ಯವಿಲ್ಲದ ಕಾರಣ ಮತ್ತು ಆರೋಗ್ಯಕ್ಕೆ ಹಾನಿಕರವಾದವು ಕಲಬೆರಕೆ ಸೇಂದಿಯಸೇವನೆಯನ್ನು ತಡೆಗಟ್ಟವ ಸಲುವಾಗಿ ಸರ್ಕಾರವು ಕೊಡಗುಜಿಲ್ಲೆಯಲ್ಲಿ ಸೇಂದಿ ಮಾರಾಟವನ್ನು ನಿಷೇಧಿಸಿದೆ.

ಆ) ದಕ್ಷಿಣ ಕನ್ನಡಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸೇಂದಿ ಮರಗಳು ಲಭ್ಯವಿರುವ ಕಾರಣಇಲ್ಲಿ ಸೇಂದಿ ಇಳಿಸಲು ಅನುಮತಿ ನೀಡಲಾಗಿದೆ. ಆದರೆ ಕೊಡಗು ಜಿಲ್ಲೆಯಲ್ಲಿಸಾಕಷ್ಟು ಮರಗಳು ಲಭ್ಯವಿಲ್ಲದಿರುವ ಕಾರಣಸರ್ಕಾರವು ಸೇಂದಿ ಮಾರಾಟವನ್ನು ನಿಷೇಧಿಸಿದೆ.

ಇ) ಇಲ್ಲ

ತಿಪಟೂರು ವಿಧಾನಸಭಾ ಕ್ಷೇತ್ರದಲ್ಲಿ ಹಸಿರು ಪಡಿತರ ಚೀಟಿಗಳನ್ನು ನೀಡುವ ಬಗ್ಗೆ

298 (641) ಶ್ರೀ ನಂಜಾಮರಿ (ತಿಪಟೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರೆಗೆ ಹಂಚಲಾದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು? ಆ ಪೈಕಿ ಹಸಿರುಪಡಿತರ ಚೀಟಿಗಳ ಸಂಖ್ಯೆ ಎಷ್ಟು?

ಆ) ತಿಪಟೂರು ವಿಧಾನಸಭಾ ಕ್ಷೇತ್ರದಲ್ಲಿ ಹಸಿರು ಪಡಿತರ ಚೀಟಿ ನೀಡಲು ಸಮೀಕ್ಷೆ ಕೈಗೊಳ್ಳಲಾಗಿದೆಯೇ ಮತ್ತು ಎಂದಿನಿಂದ ಕೈಗೊಳ್ಳಲಾಗಿದೆ?

ಇ) ಹಾಗಿದ್ದಲ್ಲಿ ಹಸಿರು ಪಡಿತ ಚೀಟಿಗಳನ್ನು ನೀಡಲಾದವರ ಸಂಖ್ಯೆ ಎಷ್ಟು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 31.12.98ರ ಅಂತ್ಯಕ್ಕೆ ರಾಜ್ಯದಲ್ಲಿ 1,07,17 772 ಪಡಿತರ ಚೀಟಿಗಳನ್ನು ವಿತರಿಸಿದ್ದು ಇವುಗಳಲ್ಲಿ 62,54,884 ಹಸಿರು ಪಡಿತರ ಚೀಟಿಗಳು.